# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 19-03-2022 ರಂದು ಸಮಯ 12.00 ಗಂಟೆಗೆ ವಾರ್ಡ್ ಸಂಖ್ಯೆ: 155 ಹನುಮಂತನಗರಕ್ಕೆ ಸಂಬಂಧಪಟ್ಟಂತೆ ಹರಿಹರಗುಡ್ಡ ಉದ್ಯಾನವನ (ತಿಮ್ಮೇಶಪ್ರಭು ಉದ್ಯಾನವನ)ದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

1. ಶ್ರೀಮತಿ ಉಮಾದೇವಿ ಬಳಿಗಾರ್, ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀ ಆನಂದ್.ಜಿ, ಸಹಾಯಕ ಅಭಿಯಂತರರು ವಾ.ನಂ.-155 – ಸದಸ್ಯ ಕಾರ್ಯದರ್ಶಿ
3. ಶ್ರೀ. ನಟರಾಜ್ (ಹಿ.ಆ.ಪ.) (ಹಿ.ಆ.ಪ.) – ಸದಸ್ಯರು
4. ಶ್ರೀ.ರಾಮಚಂದ್ರ (ಕಿ.ಅ-155) ಬೆಸ್ಕಾಂ
5. ಶ್ರೀಮತಿ.ಜ್ಯೋತಿ (ಟೆ.ಇ.)- ಸದಸ್ಯರು
6. ಕೃಷ್ಣಮೂರ್ತಿ-ಜಲ ಪರಿವೀಕ್ಷಕರು ಬಿಡಬ್ಲ್ಯೂಎಸ್‌ಎಸ್‌ಬಿ
7. ಶ್ರೀ ಪಿಳ್ಳಪ್ಪ – ಸಾರ್ವಜನಿಕರು.
8. ಶ್ರೀ ಉದಯ- ಸಾರ್ವಜನಿಕರು.
9. ಶ್ರೀ ಎಂ.ಚಂದ್ರಶೇಖರ್ – ಸಾರ್ವಜನಿಕರು.

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ 155ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ನೆರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರಿಗೆ ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ನೋಡಲ್ ಅಧಿಕಾರಿಗಳು ಮಾತನಾಡಿ ಲಕ್ಷ್ಮೀಪುರ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಯಿಂದ ನೀರು ನಿಗದಿತ ಸಮಯದಲ್ಲಿ ಬಿಡುತ್ತಿಲ್ಲದರಿಂದ ಪರ್ಯಾಯ ವ್ಯವಸ್ಥೆ/ ನೀರಿನ ಟ್ಯಾಂಕ್ ಮುಖಾಂತರ ನೀರು ನೀಡುವ ವ್ಯವಸ್ಥೆ ಮಾಡಲು ಸಂಬಂಧಪಟ್ಟವರಿಗೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು
ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರಿಗೆ ಕ್ರಮ ವಹಿಸಲು ಸೂಚಿಸಲಾಗಿದೆ.

ನೋಡಲ್ ಅಧಿಕಾರಿಗಳು ಮಾತನಾಡಿ ಬಸವನಗುಡಿ ವಾರ್ಡ ವ್ಯಾಪ್ತಿಯಲ್ಲಿರುವ ಕಸವನ್ನು ನಿಗದಿತ ಸಮಯದಲ್ಲಿ ಮನೆ, ಮನೆ ಗಳಿಂದ ಕಸವನ್ನು ತೆರವು ಗೊಳಿಸಲು ಕ್ರಮವಹಿಸಲು ಸೂಚಿಸಲಾಗಿದೆ.

ಕ್ರಮ: – ಕಿರಿಯ/ಹಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್-155 ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.

Generated Via Scanner Go

ನೋಡಲ್ ಅಧಿಕಾರಿಗಳು ಮಾತನಾಡಿ ಎ.ಕೆ.ಕಾಲೋನಿ ಪಾರ್ಕನಲ್ಲಿ ಬೆಳೆದಿರುವ ಗಿಡ ಗಂಟಿಗಳನ್ನು ಕಟಿಂಗ್ ಮಾಡಲು ಕ್ರಮಕೈಗೊಳ್ಳಲು ಸೂಚಿಸಿದರು.

ಕ್ರಮ: - ಕಿರಿಯ/ಹಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್-155 ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.

ನೋಡಲ್ ಅಧಿಕಾರಿಗಳು ಮಾತನಾಡಿ ಕಾವೇರಿ ನದಿ ರಸ್ತೆಗೆ ಹೊಂದಿಕೊಂಡಿರುವ ಮುಜರಾಯಿ ಇಲಾಖೆಯ ಜಾಗದಲ್ಲಿ ಗಿಡಗಳು ತುಂಬ ಬೆಳೆದುಕೊಂಡಿದ್ದು ಇದರಿಂದ ಬೆಸಿಗೆ ಸಮಯದಲ್ಲಿ ಹಾವುಗಳು ತೊಂದರೆಯನ್ನುಂಟು ಮಾಡುವ ಸಂಭವವಿರುತ್ತದೆ.ಆದುದರಿಂದ ಸರ್ವಜನೀಕರ ಹಿತದೃಷ್ಟಿಯಿಂದ ಸದರಿ ಗಿಡಗಂಟಿಗಳನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲು ಸೂಚಿಸಿದರು.

ಕ್ರಮ: - ಕಿರಿಯ/ಹಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್-155 ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.

ನೋಡಲ್ ಅಧಿಕಾರಿಗಳು ಮಾತನಾಡಿ ಮಾನ್ಯ ವಲಯ ಆಯುಕ್ತರು (ದಕ್ಷಿಣ) ರವರ ಆದೇಶದಂತೆ 2021-22 ನೇಸಾಲಿನ ಕಾಮಗಾರಿಗಳ ಕ್ರಿಯಾಯೋಜನೆಗೆ ಪಟ್ಟಿಗಳಿಗೆ ಅನುಮೋದನೆ ನೀಡಿರುವಂತೆ ಸಾರ್ವಜನೀಕರ ಹಿತದೃಷ್ಟಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು ವಾರ್ಡ ಕಮಿಟಿ ಸಭೆಯಲ್ಲಿ ಉಪಸ್ಥಿತರಿರುವ ಎಲ್ಲರರೊಂದಿಗೆ ಚರ್ಚಿಸಿ ಸರ್ವಾನುಮತಿಯಿಂದ ಅನುಮತಿಯನ್ನು ಪಡೆಯಲಾಯಿತು.

## ಕಾಮಗಾರಿಗಳ ವಿವರ

| Sl No | Name of Works | Estimate Amount (in Lakhs) |
|---|---|---|
| | **P-3726** | |
| 1 | Filling up of Potholes in ward jurisdiction in Ward No.155 . | 20.00 |
| 2 | Maintanence of foot paths, Drains and Re -Asphalting of damaged Roads in ward jurisdiction in ward no 155. | 20.00 |
| | **P-1802** | |
| 3 | Annual Maintanence of Water supply pipe lines and Bore well in ward jurisdiction in ward no 155. | 20.00 |
| | **Total Amount in Rs.** | **60.00** |

ಕ್ರಮ: - ಸಹಾಯಕ ಅಭಿಯಂತರರು ವಾರ್ಡ್-154
ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.



Generated Via Scanner Go

ಹನುಮಂತನಗರ ವಾರ್ಡ್‌ನಲ್ಲಿ ಬರುವ ಗಂಗಾನದಿ ರಸ್ತೆ, ಹಿಂದೂ ಮಹಾಸಾಗರ ರಸ್ತೆ, ಬ್ರಹ್ಮಪುತ್ರ ನದಿ ರಸ್ತೆ, ಮತ್ತು ಮಹದೇವಶ್ವರ ದೇವಸ್ಥಾನದ ಎದುರು ವಿದ್ಯುತ್ ದೀಪ ಉರಿಯುತ್ತಿಲ್ಲ ವೆಂದು ಹಾಗೂ ಇದನ್ನು ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಸದರಿ ವಿದ್ಯುತ್ ದೀಪ ಸರಿಪಡಿಸಲು ವಿದ್ಯುತ್ ವಿಭಾಗ(ದ) ಬಿ.ಬಿ.ಎಂ.ಪಿ. ರವರಿಗೆ ಸೂಚಿಸಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

ವಾರ್ಡ್ ಕಮಿಟಿ ಸಭೆಯಲ್ಲಿ ಉಪಸ್ಥಿತರಿರುವ ಅಧಿಕಾರಿ ವರ್ಗದವರಿಗೆ, ವಾರ್ಡ್ ಕಮಿಟಿ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರತಿ ತಿಂಗಳ ಮೊದಲನೆಯ ಮತ್ತು ಮೂರನೇ ಶನಿವಾರದಂದು ವಾರ್ಡ್ ಕಮಿಟಿ ಸಭೆಯನ್ನು ಏರ್ಪಡಿಸಲಾಗುವುದು ಎಂದು ತಿಳಿಸುತ್ತಾ, ವಂದನಾರ್ಪಣೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| 19/03/22 | |
| ಕಾರ್ಯದರ್ಶಿ | ಅಧ್ಯಕ್ಷರು ವಾರ್ಡ್ ಸಮಿತಿ |
| ಸಹಾಯಕ ಅಭಿಯಂತರರು | ಹಾಗೂ ನೋಡಲ್ ಅಧಿಕಾರಿಗಳು |
| ವಾರ್ಡ್ ಸಂಖ್ಯೆ-155 ಹನುಮಂತನಗರ | ವಾರ್ಡ್ ಸಂಖ್ಯೆ-155 ಹನುಮಂತನಗರ |

ಪ್ರತಿಯನ್ನು:-

1. ಮಾನ್ಯ ಮುಖ್ಯ ಆಯುಕ್ತರು, ಬೃಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ಮತ್ತು ವಲಯ ಆಯುಕ್ತರು(ದ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು (ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
6. ಮಾನ್ಯ ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ,
7. ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) /ಸ.ಕಾ.ನಿ.ಅ (ಬ.ಗು) ಉಪವಿಭಾಗ ರವರ ಅವಗಾಹನೆಗೆ.
8. ಆರೋಗ್ಯ ವೈದ್ಯಾಧಿಕಾರಿಗಳು, ಬಸವನಗುಡಿ ವಿಭಾಗ ರವರ ಅವಗಾಹನೆಗೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಹನುಮಂತನಗರ ರವರ ಅವಗಾಹನೆಗೆ.
10. ಪೋಲೀಸ್ ಇನ್ಸ್‌ಪೆಕ್ಟರ್, ಕಾನೂನು ಸುವ್ಯವಸ್ಥೆ ಹನುಮಂತನಗರ/ಕೆಂಪೇಗೌಡನಗರ ಪೋಲೀಸ್ ಠಾಣೆ ರವರ ಅವಗಾಹನೆಗೆ.
11. ಪೋಲೀಸ್ ಇನ್ಸ್‌ಪೆಕ್ಟರ್, ಬಸವನಗುಡಿ ಸಂಚಾರಿ ಪೋಲೀಸ್ ಠಾಣೆ ರವರ ಅವಗಾಹನೆಗೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಎಂ.ಎನ್.ಕೆ ಪಾರ್ಕ್, ಬಸವನಗುಡಿ ರವರ ಅವಗಾಹನೆಗೆ.
13. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
14. ಕಛೇರಿ ಕಡತಕ್ಕೆ.

Generated Via Scanner Go